ದೇವನಹಳ್ಳಿ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳ ಕುರಿತು

1969 (2376) ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಹಾಲಿ ಇರುವ ಕುಡಿಯುವ ನೀರಿನ ಕೊಳವೆಬಾವಿಗಳಲ್ಲಿ ನೀರು ಕಡಿಮೆ ಇರುವ ಬಗ್ಗೆ ಸರ್ಕಾರವು ಗಮನಹರಿಸಿದೆಯೆ;

ಆ) ಹಾಗಿದ್ದಲ್ಲಿ, ಸದರಿ ವಿಷಯದ ಬಗ್ಗೆ ಗಮನಹರಿಸಿ ಶಾಶ್ವತ ಪರಿಹಾರ ನೀಡಲು ಸರ್ಕಾರವು ಕ್ರಮ ತೆಗೆದುಕೊಳ್ಳಲಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹೌದು.

ಆ) ಅಂತರ್ಜಲವನ್ನು ಕೃತಕವಾಗಿ ಪುನರ್ ಪ್ರವಹಿಸಿ ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಹೆಚ್ಚಿಸುವುದಕ್ಕಾಗಿ ಮತ್ತು ಇಳುವರಿ ನಿರಂತರವಾಗಿ ಇರುವಂತೆ ನೋಡಿಕೊಳ್ಳುವುದಕ್ಕಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ರೂ.471.00 ಕೋಟಿ ಮೊತ್ತದ ಯೋಜನೆಯೊಂದನ್ನು ತಯಾರಿಸಿದ್ದು, ಈ ಯೋಜನೆಯಡಿ ದೇವನಹಳ್ಳಿ ತಾಲ್ಲೂಕು ಸೇರಿದಂತೆ 14 ಜಿಲ್ಲೆಗಳ ವ್ಯಾಪ್ತಿಯಡಿ ಒಟ್ಟು 58 ತಾಲ್ಲೂಕುಗಳು ಒಳಗೊಂಡಿವೆ. ಈ ಯೋಜನೆಯ ಅನುಷ್ಠಾನಕ್ಕಾಗಿ ವಿಶ್ವಬ್ಯಾಂಕಿನ ನೆರವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ.

ಬಸವ ಕಲ್ಯಾಣದಲ್ಲಿ ಶರಣ ಸಂಶೋಧನಾ ಕೇಂದ್ರ

1971 (2640) ಶ್ರೀ ಎಂ.ಜಿ.ಮೂಳೆ (ಬಸವಕಲ್ಯಾಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಬಸವಕಲ್ಯಾಣದಲ್ಲಿ ಶರಣ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದಕ್ಕೆ ಎಂದು ಮಂಜೂರಾತಿಯನ್ನು ನೀಡಲಾಯಿತು;

ಆ) ಈ ಕೇಂದ್ರದ ಸ್ಥಾಪನೆಗಾಗಿ ಯಾವ ಸ್ಥಳದಲ್ಲಿ ಎಷ್ಟು ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ಇದಕ್ಕೆ ವೆಚ್ಚವಾಗಿರುವ ಹಣವೆಷ್ಟು;

ಇ) ಇದುವರೆವಿಗೆ ಈ ಕೇಂದ್ರದ ಸ್ಥಾಪನೆ ಬಗ್ಗೆ ಯಾವ ಯಾವ ಪ್ರಗತಿ ಕಾರ್ಯಗಳು ನಡೆದಿವೆ; ಹಾಗೂ ಇದಕ್ಕಾಗಿ 31-03-2000ರ ವರೆವಿಗೆ ಖರ್ಚು ಮಾಡಿರುವ ಹಣವೆಷ್ಟು;

ಈ) ಈ ಕೇಂದ್ರದ ಸ್ಥಾಪನೆಗೆ ಮಂಜೂರಾತಿ ದೊರೆತು ಹಲವಾರು ತಿಂಗಳುಗಳಾದರೂ ಇದವರೆವಿಗೆ ಈ ಕೇಂದ್ರವನ್ನು ಪ್ರಾರಂಭಿಸದೇ ಇರಲು ಕಾರಣಗಳೇನು; ಹಾಗೂ ಇದರ ಪ್ರಾರಂಭಕ್ಕೆ ಇರುವ ತೊಂದರೆಗಳೇನು;

ಉ) ಈ ವರ್ಷದಲ್ಲಿ ಬಸವಕಲ್ಯಾಣದಲ್ಲಿ ಶರಣ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ?